ಸ್ಥಳ ವಿಶೇಷ

# ಪ್ರಧಾನಿ ಜೊತೆ ಸೆಲ್ಫಿ ಬೇಕೆ?



ಪ್ರಧಾನಿಯೊಂದಿಗೆ ಸೆಲ್ಫಿ, ವಿಹಾರ ಹಾಗೂ ವರ್ಚುವಲ್ ಹೆಲಿಕಾಪ್ಟರ್‌ನಲ್ಲಿ ತಿರುಗಾಟ– ದೆಹಲಿಯ 'ಪ್ರಧಾನಮಂತ್ರಿಗಳ ಸಂಗ್ರಹಾಲಯ'ದಲ್ಲಿ ಎಲ್ಲವೂ ಲಭ್ಯ.

■ ಪದ್ಮಿನಿ ನಾಗರಾಜು

ದೆಹಲಿಯಿಂದ ಬರುತ್ತಿದ್ದಂತೆ ನನ್ನ ವಾಟ್ಸಾಪ್ ಸ್ಟೇಟಸ್‌ನಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರೊಂದಿಗೆ ನಾನು ಕುಳಿತಿರುವ ಚಿತ್ರವೊಂದನ್ನು ಹಾಕಿದೆ. ಅದನ್ನು ನೋಡಿ ತುಂಬಾ ಜನ 'ಗ್ರೇಟ್, ಯಾವಾಗ ಭೇಟಿ ಮಾಡಿದ್ರಿ? ಭೇಟಿಗೆ ಅವಕಾಶ ಹೇಗೆ ಸಿಕ್ತು?' ಹೀಗೆ ಅನೇಕ ಪ್ರಶ್ನೆಗಳನ್ನು ಹಾಕಿದ್ರು. ಅವರಿಗೆ ಹೇಗೆ ಹೇಳಲಿ – ಇದು ಐವತ್ತು ರೂಪಾಯಿಗೆ ಸಿಕ್ಕ ಪ್ರಧಾನಿಗಳ ಚಿತ್ರ ಅಂತ! ಅಷ್ಟು ವಾಸ್ತವಿಕವಾಗಿತ್ತು ಆ ಚಿತ್ರ. ಅದು ಸಿಕ್ಕಿದ್ದು ಪ್ರಧಾನಮಂತ್ರಿಗಳ ಸಂಗ್ರಹಾಲಯದಲ್ಲಿ.

ದೆಹಲಿಯ ತೀನ್‌ಮೂರ್ತಿ ವೃತ್ತದಲ್ಲಿರುವ ಪಿ.ಎಂ. ಮ್ಯೂಸಿಯಂಗೆ ನಾನು ಮಧ್ಯಾಹ್ನ 12 ಗಂಟೆಗೆ ತಲುಪಿದೆ. ಇದು ಎರಡು ಬ್ಲಾಕ್‌ಗಳಲ್ಲಿದ್ದು, ಮೊದಲ ಬ್ಲಾಕ್‌ನಲ್ಲಿ ಸ್ವತಂತ್ರ ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಅವರು 16 ವರ್ಷಗಳ ಕಾಲ ವಾಸವಾಗಿದ್ದ ಮನೆ 'ತೀನ್‌ಮೂರ್ತಿ' ಭವನವಿದೆ. ಅದು, ನೈಸರ್ಗಿಕ ಪರಿಸರದಲ್ಲಿ ತನ್ನ ಪುರಾತನ ಮೆರುಗನ್ನು ಒಳಗೊಂಡಿದೆ. ಸುತ್ತಲಿನ ಸುಂದರ ಪ್ರಕೃತಿ ಗಮನಸೆಳೆಯುತ್ತದೆ. ಈ ಭವನದ ಹಿಂಭಾಗದಲ್ಲಿ ಎರಡನೇ ಬ್ಲಾಕ್ ಇದ್ದು, ದೇಶವನ್ನು ಮುನ್ನಡೆಸಿದ ಎಲ್ಲಾ ಪ್ರಧಾನಿಗಳಿಗೆ ಅರ್ಪಿಸಿದ ಅಪರೂಪದ ಡಿಜಿಟಲ್ ಮಾಧ್ಯಮವನ್ನು ಒಳಗೊಂಡಿರುವ ಸಂಗ್ರಹಾಲಯ ಅಲ್ಲಿದೆ.

ಮೊದಲು ತೀನ್‌ಮೂರ್ತಿ ಭವನಕ್ಕೆ ಪ್ರವೇಶಿಸಿದರೆ ಅಲ್ಲಿ ಭಾರತವನ್ನು ಆಳಿದ ಬ್ರಿಟಿಷರ ಕಾಲದಲ್ಲಿ ನಡೆದ ಹಲವು ಪ್ರಮುಖ ಘಟನೆಗಳ ವಿಡಿಯೊ ನೋಡಬಹುದು. ನವೀಕರಿಸಿದ ಈ ಭವನದಲ್ಲಿ ಸಂವಿಧಾನಕ್ಕೆ ಸಂಬಂಧಿಸಿದ ಹಲವು ಮಾಹಿತಿ–ಚಿತ್ರಗಳಿವೆ. ಮಾನ್ಯ ಮಾಡಿರುವ ಅಷ್ಟೂ ಭಾಷೆಗಳಲ್ಲಿ ಸಂವಿಧಾನವನ್ನು ಇಲ್ಲಿ ಓದಬಹುದಾಗಿದೆ.

ಮೇಲಿನ ಹಂತದಲ್ಲಿ ನೆಹರು ಅವರ ಕೋಣೆಗಳನ್ನು ಮೂಲದಲ್ಲಿರುವಂತೆಯೇ ಸಂರಕ್ಷಿಸಲಾಗಿದೆ. ಅವರು ಕೊನೆಯುಸಿರೆಳೆದ ಕೋಣೆ, ಹಾಸಿಗೆ, ಅವರ ಗ್ರಂಥಾಲಯವನ್ನು ನೋಡಬಹುದು. ನೆಹರು ಬಳಸುತ್ತಿದ್ದ ವಸ್ತ್ರ, ಪತ್ರಗಳು, ಐತಿಹಾಸಿಕ ಸುದ್ದಿಯನ್ನು ಮುದ್ರಿಸಿರುವ ಪತ್ರಿಕೆಗಳ ಪ್ರತಿಗಳು, ಛಾಯಾಚಿತ್ರಗಳು ಹಾಗೂ ವಿದೇಶದಲ್ಲಿ ಅವರಿಗೆ ನೀಡಿದ ಸ್ಮರಣಿಕೆಗಳನ್ನು ಕಾಣಬಹುದು. ನೆಹರು ಅವರ ಬದುಕಿನ ಅನೇಕ ಮಹತ್ವದ ಕ್ಷಣಗಳ ತುಣುಕುಗಳು ಇಲ್ಲಿವೆ. ಮತ್ತೊಂದು ವಿಭಾಗವು ಭಾರತ ವಿಭಜನೆಯಾದ ನೋವಿನ ಕ್ಷಣಗಳನ್ನು ದಾಖಲಿಸುತ್ತದೆ.



2018ರಲ್ಲಿ ಪ್ರಧಾನಮಂತ್ರಿ ಮೋದಿ ಅವರು ಎರಡನೇ ಬ್ಲಾಕ್‌ಗೆ ಚಾಲನೆ ನೀಡಿ, ಏಪ್ರಿಲ್ 14, 2022ರಲ್ಲಿ ಸಾರ್ವಜನಿಕರಿಗೆ ಅರ್ಪಿಸಲಾದ 'ಪ್ರಧಾನಮಂತ್ರಿ ಸಂಗ್ರಹಾಲಯ'ವು ಈವರೆಗಿನ ಎಲ್ಲ ಪ್ರಧಾನಮಂತ್ರಿಗಳಿಗೆ ನೀಡಿರುವ ಗೌರವವಾಗಿದೆ. ಕಳೆದ 75 ವರ್ಷಗಳಲ್ಲಿ ನಮ್ಮ ರಾಷ್ಟ್ರದ ಅಭಿವೃದ್ಧಿಗೆ ಪ್ರತಿಯೊಬ್ಬ ಪ್ರಧಾನಿಯೂ ಆಯಾ ಕಾಲದಲ್ಲಿ ನೀಡಿರುವ ಕೊಡುಗೆ ಹಾಗೂ ಆ ಸಾಮೂಹಿಕ ಪ್ರಯತ್ನದ ಫಲವಾಗಿ ಇಂದು ಭಾರತ ಪ್ರಬಲ ರಾಷ್ಟ್ರವಾಗುವತ್ತ ನಡೆಯುತ್ತಿರುವ ದಾರಿಯನ್ನು ಸಂಗ್ರಹಾಲಯ ದಾಖಲಿಸುತ್ತದೆ.

ಈ ವಸ್ತುಸಂಗ್ರಹಾಲಯವು ಶಿಕ್ಷಣ, ಮಾಹಿತಿ ಜೊತೆಗೆ ಮನರಂಜನೆಯನ್ನು ನೀಡುತ್ತದೆ. ಇಲ್ಲಿ ಇದುವರೆಗಿನ ಪ್ರಧಾನಿಗಳು ಭಾರತದ ಅಭಿವೃದ್ಧಿಗೆ ನೀಡಿದ ಕೊಡುಗೆಗಳು, ಆ ಕಾಲದ ಐತಿಹಾಸಿಕ ಮಹತ್ವಗಳನ್ನು ತಿಳಿಸುತ್ತದೆ. ಜೊತೆಗೆ ಇಂದಿನ ತಂತ್ರಜ್ಞಾನವನ್ನು ಬಳಸಿ ಪ್ರಧಾನಮಂತ್ರಿಯೊಂದಿಗೆ ಸೆಲ್ಫಿ ತೆಗೆದುಕೊಳ್ಳಬಹುದು. ನೆಚ್ಚಿನ ಪ್ರಧಾನಿಯೊಂದಿಗೆ ವಿಹಾರ ಮಾಡಬಹುದು, ವರ್ಚುವಲ್ ಹೆಲಿಕಾಪ್ಟರ್‌ನಲ್ಲಿ ತಿರುಗಾಡಬಹುದು.

ದೇಶದ ಗತಕಾಲವನ್ನು ವರ್ತಮಾನದೊಂದಿಗೆ ಬೆಸೆಯುವ ಆಕರ್ಷಕ ಹಾಗೂ ವೈಶಿಷ್ಟ್ಯಪೂರ್ಣ ಸಂಗ್ರಹಾಲಯ ಇದಾಗಿದೆ. ಈ ವಿಶಿಷ್ಟ ಅನುಭೂತಿ ಪಡೆಯಲು ಸಂದರ್ಶಕರು 50 ರೂಪಾಯಿ ನೀಡಬೇಕಷ್ಟೆ.

ಪ್ರಧಾನಮಂತ್ರಿ ಸಂಗ್ರಹಾಲಯ ಮಂಗಳವಾರದಿಂದ ಭಾನುವಾರದವರೆಗೆ ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ತೆರೆದಿರುತ್ತದೆ. ಸಂಜೆ 7.30ರಿಂದ 8.45ರವರೆಗೆ ಬೆಳಕು ಮತ್ತು ಧ್ವನಿ ಪ್ರದರ್ಶನ ನಡೆಯುತ್ತದೆ. ಮ್ಯೂಸಿಯಂ ನೋಡಲು ಸುಮಾರು 2–3 ಗಂಟೆ ಸಮಯವಾದರೂ ಬೇಕು. ಅಲ್ಲಿಯೇ ಸಣ್ಣ ರೆಸ್ಟೊರೆಂಟ್ ಕೂಡ ಇದೆ. ಸ್ಮರಣಿಕೆಯ ಮಳಿಗೆಯಲ್ಲಿ ಖರೀದಿಸಲು ಅವಕಾಶವಿದೆ.

ಪ್ರತಿಕ್ರಿಯಿಸಿ: feedback@sudha.co.in